ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ

Spl.NDPS 9/2022

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | ನಾಗರಾಜ ಸುಣಗಾರ | ಪಿ.ಡಬ್ಲ್ಯೂ. | 6 |
| ತಂದೆಯ ಹೆಸರು | ಃ | ಮಹಾದೇವಪ್ಪ | ಸಿ.ಡಬ್ಲ್ಯೂ. | 6 |
| ವಯಸ್ಸು | ಃ | 44 ವರ್ಷ | | |
| ಉದ್ಯೋಗ | ಃ | ಹೆಚ್.ಸಿ 335 ಹರಿಹರ ನಗರ ಪೋಲೀಸ್ ಠಾಣೆ. | | |
| ವಾಸ ಸ್ಥಳ | ಃ | ಹರಿಹರ. | | |

ದಿ.04.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಕಲಂ 299 ಸಿ.ಆರ್.ಪಿ.ಸಿ. ಅಡಿಯಲ್ಲಿ ಸಾಕ್ಷ್ಯವನ್ನು ದಾಖಲಾಯಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ.) ಃ**

1. 2019 ರಿಂದ 2022 ರವರಗೆ ಹರಿಹರ ನಗರ ಪೋಲೀಸ್ ಠಾಣೆಯಲ್ಲಿ ಹೆಡ್ ಕಾನ್ಸಟೇಬಲ್ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ನಂತರ ವಿದ್ಯಾನಗರ ಪೋಲೀಸ್ ಠಾಣೆಗೆ ವರ್ಗಾವಣೆಯಾಗಿ ಪುನಃ ಹರಿಹರ ನಗರ ಪೋಲೀಸ್ ಠಾಣೆಗೆ ವರ್ಗಾವಣೆಯಾಗಿರುತ್ತೇನೆ.

2. ದಿನಾಂಕ 12.09.2020 ರಂದು ಬೆಳಿಗ್ಗೆ 10.00 ಗಂಟೆಯ ಸಮಯದಲ್ಲಿ ಹರಿಹರ ವೃತ್ತ ನಿರಿಕ್ಷಕರಾದ ಚಾಸಾ.1 ರವರು ನನ್ನನ್ನು, ಚಾಸಾ.5, ಚಾಸಾ.7 ರಿಂದ ಚಾಸಾ.13 ರವರುಗಳನ್ನು ತಮ್ಮ ಕಛೇರಿಗೆ ಕರೆಸಿ, ಹರಿಹರ ಗ್ರಾಮಾಂತರ ಠಾಣಾ ಸರಹದ್ದಿನಲ್ಲಿ ಹನಗವಾಡಿ ಗ್ರಾಮದ ಬಳಿ ಭರಣಿ ಡಾಬಾದ ಹತ್ತಿರ ಯಾರೋ ಮೂರು ಜನ ಆಸಾಮಿಗಳು ಗಾಂಜಾ ಮಾರಾಟ ಮಾಡುತ್ತಿದ್ದಾರೆಂಬ ಮಾಹಿತಿ ಮೇರೆಗೆ ದಾಳಿ ಮಾಡಲು ಹೋಗುವಂತೆ ಹೇಳಿ ಸಹಕರಿಸುವಂತೆ ತಿಳಿಸಿದರು.

3. ಪತ್ರಾಂಕಿತ ಅಧಿಕಾರಿಯಾದ ಚಾಸಾ.4 ಮತ್ತು ಪಂಚರಾದ ಚಾಸಾ.2 ಮತ್ತು ಚಾಸಾ.3 ರವರಿಗೆ ನೋಟೀಸು ಜಾರಿ ಮಾಡಿ ಕರೆಸಿಕೊಂಡು, ಅವರಿಗೆ ದಾಳಿ ವಿಚಾರವನ್ನು ತಿಳಿಸಿ ಇಲಾಖಾ ಜೀಪಿನಲ್ಲಿ ನಾವೆಲ್ಲಾರೂ ಸೇರಿ ದಾಳಿ ಬೇಕಾಗುವ ಪರಿಕರಗಳೊಂದಿಗೆ ಮಧ್ಯಾಹ್ನ 12.50 ಗಂಟೆಗೆ ಪೋಲೀಸ್

ಠಾಣೆಯಿಂದ ಹೊರಟು ಮಧ್ಯಾಹ್ನ 01.05 ನಿಮಿಷ್ಯಕ್ಕೆ ಹನಗವಾಡಿ ಗ್ರಾಮದ ಡಾಬಾದ ಹತ್ತಿರ ಹೋಗಿ ಜೀಪನ್ನು ಮರೆಯಲ್ಲಿ ನಿಲ್ಲಿಸಿ ಸೂಕ್ಷವಾಗಿ ನೋಡಲಾಗಿ ಭರಣಿ ಡಾಬಾದ ಹತ್ತಿರ ಮೂರು ಜನ ಆಸಾಮಿಗಳು ನಿಂತಿದ್ದು, ಚಾಸಾ.1 ರವರು ನಮ್ಮೆಲ್ಲಾರ ಸಹಕಾರದಿಂದ ಸದರಿ ಆಸಾಮಿಗಳನ್ನು ಸುತ್ತುವರೆದು ಹಿಡಿದುಕೊಂಡೆವು.

4. ಸದರಿ ಮೂರು ಜನರ ಹೆಸರುಗಳನ್ನು ಕೇಳಲಾಗಿ ಮೊದಲನೆಯವನು ರಾಹುಲ್, ಎರಡನೇಯವನು ಮಲ್ಲಿಕಾರ್ಜುನ ಮತ್ತು ಮೂರನೇಯವನು ಪ್ರಮೋದ್ ಎಂದು ತಿಳಿಸಿದರು. ನಂತರ ಪತ್ರಾಂಕಿತ ಅಧಿಕಾರಿ ಚಾಸಾ.4 ರವರು ಸದರಿ ಮೂರು ಜನರ ಬಳಿ ಇದ್ದ ಬ್ಯಾಗಿನಲ್ಲಿ ಏನು ಇದೆ ಎಂದು ಕೇಳಿದರು. ಸದರಿ ಬ್ಯಾಗಿನಲ್ಲಿ ಗಾಂಜಾ ಸೊಪ್ಪುಗಳು ಇರುವುದಾಗಿ ತಿಳಿಸಿದರು. ಚಾಸಾ.4 ರವರು ಆರೋಪಿಗಳಿಗೆ ಅಂಗಶೋಧನೆ ಮಾಡಲು ಅನುಮತಿ ಕೇಳಿದ್ದು, ಆರೋಪಿತರು ಅನುಮತಿ ನೀಡಿದರು.

5. ನಂತರ ಪಂಚರ ಸಮಕ್ಷಮ 1 ನೇ ಆರೋಪಿಯ ಕೈಯಲ್ಲಿರುವ ಕೆಂಪು ಬಣ್ಣದ ಪಾಸ್ಟ್ ಟ್ರಾಕ್ ಬ್ಯಾಗನ್ನು ತೆರೆದು ನೋಡಲಾಗಿ ಅದರಲ್ಲಿ ಪಾರದರ್ಶಕ ಪ್ಲಾಸ್ಟಿಕ್ ಕವರ್ ಗಳು ಇದ್ದು, ಅವುಗಳಲ್ಲಿ ಒಣಗಿದ ಗಾಂಜಾ ಸೊಪ್ಪುಗಳು ಕಂಡು ಬಂದವು. ಅವುಗಳು ಘಾಟು ವಾಸನೆ ಇದ್ದು, ಅರೆ ಬರೆ ಒಣಗಿದಂತೆ ಇತ್ತು. ಅವುಗಳನ್ನು ಸೂಕ್ತವಾಗಿ ಪರಿಕ್ಷಿಸಿ ನೋಡಲಾಗಿ ಹೂವು, ಮೊಗ್ಗು, ಸೊಪ್ಪು ಮತ್ತು ಬೀಜಗಳಿಂದ ಕೂಡಿದ್ದವು. ಅವುಗಳ ವಾಸನೆಯಿಂದ ಗಾಂಜಾ ಸೊಪ್ಪು ಎಂದು ತಿಳಿಯಿತು.

6. ಚಾಸಾ.1 ರವರು ತೂಕದ ಯಂತ್ರದ ಮೂಲಕ ಪಂಚರ ಸಮಕ್ಷಮ ತೂಕ ಮಾಡಲಾಗಿ 2 ಕೆ.ಜಿ 45 ಗ್ರಾಂ ತೂಕ ಇತ್ತು. ಪಂಚರ ಸಮಕ್ಷಮ ಸದರಿ ಗಾಂಜಾವನ್ನು ಬಿಳಿ ಬಟ್ಟೆ ಚೀಲದಲ್ಲಿ ಬಾಯಿ ಕಟ್ಟಿ 'ಡಿಬಿ' ಎಂದು ಅರಗು ಸೀಲ್ ಮಾಡಿ ಕ್ರಮ ಸಂಖ್ಯೆ.1 ಎಂದು ಗುರುತಿಸಲಾಯಿತು.

7. 2 ನೇ ಆರೋಪಿಯ ಬಳಿ ಇದ್ದ ಇನೋ ಕಂಪನಿಯ ಬೂದು ಮತ್ತು ನಿಲಿ ಬಣ್ಣ ಇರುವ ಬ್ಯಾಗನ್ನು ತೆರೆದು ನೋಡಲಾಗಿ ಅದರಲ್ಲಿ ಖಾಕಿ ಟೇಪಿನಿಂದ ಸುತ್ತಲ್ ಪಟ್ಟ ವಸ್ತು ಇದ್ದು, ಅದನ್ನು ತೆರೆದು ನೋಡಲಾಗಿ ಅದರಲ್ಲಿ ಸೊಪ್ಪುಗಳು ಇದ್ದು, ಅದು ಘಾಟುವಾಸನೆಯಿಂದ ಕೂಡಿತ್ತು ಮತ್ತು ಅರೆಬರೆ

ಒಣಗಿತ್ತು. ಅದನ್ನು ಸೂಕ್ಷ್ಮವಾಗಿ ಪರಿಶೀಲಿಸಿ ನೋಡಲಾಗಿ, ಅದರಲ್ಲಿ ಹೂವು, ಮೊಗ್ಗು, ಸೊಪ್ಪು ಮತ್ತು ಬೀಜಗಳಿಂದ ಕೂಡಿತ್ತು. ಅವುಗಳ ವಾಸನೆಯಿಂದ ಗಾಂಜಾ ಸೊಪ್ಪು ಎಂದು ತಿಳಿಯಿತು.

8. ಚಾಸಾ.1 ರವರು ತೂಕದ ಯಂತ್ರದ ಮೂಲಕ ಪಂಚರ ಸಮಕ್ಷಮ ತೂಕ ಮಾಡಲಾಗಿ 2 ಕೆ.ಜಿ 45 ಗ್ರಾಂ ತೂಕ ಇತ್ತು. ಪಂಚರ ಸಮಕ್ಷಮ ಸದರಿ ಗಾಂಜಾವನ್ನು ಬಿಳಿ ಬಟ್ಟೆ ಚೀಲದಲ್ಲಿ ಬಾಯಿ ಕಟ್ಟಿ 'ಡಿಬಿ' ಎಂದು ಅರಗು ಸೀಲ್ ಮಾಡಿ ಕ್ರಮ ಸಂಖ್ಯೆ.2 ಎಂದು ಗುರುತಿಸಲಾಯಿತು.

9. 3 ನೇ ಆರೋಪಿಯನ್ನು ಅಂಗಶೋಧನೆ ಮಾಡಲಾಗಿ ಆತನ ಪ್ಯಾಂಟಿನ ಬಲ ಜೇಬಿನಲ್ಲಿ 11 ಪಾಲಿಥಿನ್ ಪ್ಲಾಸ್ಟಿಕ್ ಕವರ್ ಗಳು ಇದ್ದವು. ಅದರಲ್ಲಿ ಸೊಪ್ಪು ಇತ್ತು. ಅದು ಗಾಂಜಾ ಸೊಪ್ಪು ಎಂದು ತಿಳಿದು, ಅದನ್ನು ತೂಕ ಮಾಡಲಾಗಿ ಅದು 80 ಗ್ರಾಂ ತೂಕ ಇತ್ತು. ಪಂಚರ ಸಮಕ್ಷಮ ಸದರಿ ಗಾಂಜಾವನ್ನು ಬಿಳಿ ಬಟ್ಟೆ ಚೀಲದಲ್ಲಿ ಬಾಯಿ ಕಟ್ಟಿ 'ಡಿಬಿ' ಎಂದು ಅರಗು ಸೀಲ್ ಮಾಡಿ ಕ್ರಮ ಸಂಖ್ಯೆ.3 ಎಂದು ಗುರುತಿಸಲಾಯಿತು.

10. 3 ನೇ ಆರೋಪಿಯ ಪ್ಯಾಂಟಿನ ಎಡ ಜೇಬಿನಲ್ಲಿ 23 ಖಾಲಿ ಪಾಲಿಥಿನ್ ಪ್ಲಾಸ್ಟಿಕ್ ಕವರ್ ಗಳು ಇದ್ದವು. ಅವುಗಳ ಬಗ್ಗೆ ಕೇಳಲಾಗಿ 1 ನೇ ಆರೋಪಿ ಇವುಗಳಲ್ಲಿ ಗಾಂಜಾ ತುಂಬಿ ಮಾರಾಟ ಮಾಡುವುದಾಗಿ ತಿಳಿಸಿದನು.

11. ನಂತರ ಚಾಸಾ.1 ರವರು ಖಾಲಿ ಎರಡು ಬ್ಯಾಗಗಳನ್ನು ಮತ್ತು ಪಾಲಿಥಿನ ಕವರ್ ಗಳನ್ನು ಮತ್ತು ಎಲ್ಲಾ ವಸ್ತುಗಳನ್ನು ಬಿಳಿ ಬಟ್ಟೆಯಲ್ಲಿ ಹಾಕಿ 'ಡಿಬಿ' ಎಂದು ಸೀಲ್ ಮಾಡಿದರು. ಸದರಿ ಆರೋಪಿತರ ಬಳಿ ಇದ್ದ ಆಟೋ ಬಗ್ಗೆ ವಿಚಾರಿಸಿದಾಗ ಸದರಿ ಆಟೋವನ್ನು ಗಾಂಜಾ ಮಾರಾಟ ಮಾಡಲು ಆಟೋದಲ್ಲಿ ಬಂದಿರುವುದಾಗಿ ತಿಳಿಸಿದರು. ಆಟೋವನ್ನು ಪರಿಶೀಲಿಸಿದಾಗ ಅದರ ನಂಬರ್ ಕೆಎ.14 ಬಿ.8176 ಹಳದಿ ಮತ್ತು ಕಪ್ಪು ಬಣ್ಣದ ಬಜಾಜ್ ಆಟೋ ಆಗಿತ್ತು.

12. ಸದರಿ ಮೇಲ್ಕಂಡ ವಸ್ತುಗಳನ್ನು ಚಾಸಾ.1 ರವರು ಪಂಚರ ಸಮಕ್ಷಮ ವಶಪಡಿಸಿಕೊಂಡು ಮಧ್ಯಾಹ್ನ 01.30 ರಿಂದ ಮಧ್ಯಾಹ್ನ 03.15 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸದರಿ

ಪಂಚನಾಮೆಯನ್ನು ಈಗಾಗಲೇ ನಿಪಿ.8 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು **ನಿಪಿ.8(ಇ)** ಎಂದು ಗುರುತಿಸಲಾಯಿತು.

13. ನಿಪಿ.8 ರ ಮಹಜರ್ ಸಮಯದಲ್ಲಿ ನಿಪಿ.9 ರಿಂದ ನಿಪಿ.18 ರಂತೆ ಫೋಟೋಗಳನ್ನು ತೆಗೆಯಲಾಯಿತು. ಸದರಿ ಫೋಟೋಗಳಲ್ಲಿ ಆರೋಪಿತರು, ಗಾಂಜಾ, ಆಟೋ ಮತ್ತು ಪೋಲೀಸ್ ಸಿಬ್ಬಂದಿ ಭಾವಚಿತ್ರ ಕಾಣಿಸುತ್ತದೆಂದು ಹೇಳುತ್ತಾರೆ. ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಈಗಾಗಲೇ ಎಂ.ಓ.1 ರಿಂದ ಎಂ.ಓ.4 ಎಂದು ಗುರುತಿಸಲಾದ ಮುದ್ದೆ ಮಾಲುಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

14. ಈ ಪ್ರಕರಣದಲ್ಲಿ ತಲೆಮರೆಸಿಕೊಂಡ 3ನೇ ಆರೋಪಿಯನ್ನು ನೋಡಿದಲ್ಲಿ ಗುರುತಿಸುತ್ತೇನೆಂದು ಹೇಳುತ್ತಾರೆ. ಎಂ.ಓ.1 ರಿಂದ ಎಂ.ಓ.4 ನ್ನು ವಶಪಡಿಸಿಕೊಂಡ ನಂತರ ಠಾಣೆಗೆ ತಂದು ಚಾಸಾ.1 ರವರು ಮುಂದಿನ ಕ್ರಮ ಜರುಗಿಸಿರುತ್ತಾರೆ.

**<u>ಪಾಟೀ ಸವಾಲು :</u>** ಪ್ರಸ್ತುತ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ .

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.